ಸಾಲಿ ಓದಿರುವವರ ಸಂಖ್ಯೆಯೇ ಕಡಿಮೆಯಿರುವ ನಮ್ಮ ಖಾನ್‌ದಾನಿನಲ್ಲಿ ಓದಿನ ಮಾತು ಒತ್ತಟ್ಟಿಗಿರಲಿ ಬರಹವೂ ಒಲಿದಿರುವ ವಿಷಯ ಅಮ್ಮನ ಪಾಲಿಗೆ ಅಭಿಮಾನಕಾರಣ ಸಂಗತಿ. ಆಕೆ ಸಾಲಿ ಕಲಿಯದಿದ್ದರೂ ಮಹತ್ವಾಕಾಂಕ್ಷಿ. ಮಕ್ಕಳಾದರೂ ಓದಬೇಕು. ನಾಲ್ಕು ಮಂದಿಯ ನಾಲಿಗೆ ಮೇಲೆ ಅವರ ಹೆಸರು ಆಡುತ್ತಿರಬೇಕು ಅನ್ನೋದು ಆಕೆಯ ಪಾಲಿಸಿ.

ಅಪ್ಪ ದನದ ದವಾಖಾನೆಯಲ್ಲಿ ಪೀವನ್. ಆತನ ದೃಷ್ಟಿಯಲ್ಲಿ ಬರಹ ದೊಡ್ಡದಲ್ಲ, ಓದೂ ದೊಡ್ಡದಲ್ಲ. ಬದುಕೇ ಎಲ್ಲಕ್ಕಿಂತ ದೊಡ್ಡದು. ಅದರಲ್ಲೂ ಮತ್ತೊಬ್ಬರಿಗೆ ದೇಹಿ ಅನ್ನದೆ, ಕಾಟ ಕೊಡದೆ, ಆರಕ್ಕೆ ಹಿಗ್ಗದೆ, ಮೂರಕ್ಕೆ ಕುಗ್ಗದೆ, ಮಿತವಾದ ಆಹಾರ–ಅಮಿತವಾದ ಆನಂದ ಅನುಭವಿಸಿ ಸದ್ದಿಲ್ಲದೆ ಸರಿದುಬಿಡಬೇಕು ಎನ್ನುವುದು ಆತನ ಜೀವನ ಸಿದ್ಧಾಂತ.

ಹೀಗಿರುವಾಗ ಒಂದು ದಿನ ನಾನು ತುಂಬಾ ಗೌರವಿಸುವ ಕವಿಗಳಾದ ಜಂಬಣ್ಣ ಅಮರಚಿಂತರು ನನ್ನನ್ನು ರಾಯಚೂರಿನ ತಮ್ಮ ಮನೆಗೆ ಕರೆಸಿಕೊಂಡು, ಬಿ.ಎಡ್ ಮಾಡುವ ಬದಲಿಗೆ ಆದಷ್ಟು ಬೇಗ ಈಗ ಮುಗಿಸಿಕೊಂಡಿರುವ ಬಿ.ಎಸ್ಸಿಯ ಆಧಾರದ ಮೇಲೆ ಒಂದು ನೌಕರಿ ಹಿಡಿಯಲು ಹೇಳಿದರು. ಅವರಿಗೆ ನನ್ನ ಬಗ್ಗೆ ಗೊತ್ತಿಲ್ಲದ್ದೇನೂ ಇರಲಿಲ್ಲ. 'ಬರಹಕ್ಕಿಂತ ಬದುಕು ಮುಖ್ಯ. ಬರೆಹವನ್ನು ಬದುಕಿನ ಯಾವ ಹಂತದಲ್ಲಾದರೂ ಮಾಡಬಹುದು; ಆದರೆ ಬದುಕನ್ನು ಬಯಸಿದಾಗ ಕಟ್ಟಿಕೊಳ್ಳಲು ಆಗಲ್ಲ. ಅದಕ್ಕೇಂತ ನಿರ್ದಿಷ್ಟ ಕಾಲಾವಧಿ ಇರುತ್ತೆ. ಅದು ತಪ್ಪಿದರೆ ಮುಗೀತು ಕಥೆ. ಮನುಷ್ಯನ ಮೂಲಭೂತ ಅಗತ್ಯಗಳು ಎರಡೇ – ಆಹಾರ ಮತ್ತು ಆನಂದ. ಬರೆಹ ಆನಂದದ ಅಗತ್ಯವನ್ನು ಪೂರೈಸುವುದೇ ಹೊರತು ಆಹಾರದ ಅಗತ್ಯವನ್ನಲ್ಲ' ಎಂದರು. ಅವರ ಮಾತುಗಳಲ್ಲಿ ಮಮಕಾರವಿತ್ತು. ಮರುಕವೂ ಇತ್ತೇ? ಗೊತ್ತಿಲ್ಲ.

ಅಲ್ಲಿಂದ ಮನೆಗೆ ಬಂದಾಗ ಸೈಕಲ್ ತಾತ ಬಂದಿದ್ದ.

## 2

ಸೈಕಲ್ ಆ ಕಾಲಕ್ಕೆ ಒಂದು ಲಕ್ಷುರಿಯಸ್ ಕಮಾಡಿಟಿ.

ಅಪ್ಪನ ದವಾಖಾನಿಯ ಡಾಕ್ಟರ್ ರವಿಶಂಕರ್ ಸರ್ ಓಡಾಡುತ್ತಿದ್ದುದು ಸೈಕಲ್ ಮೇಲೆ. ಅವರು ಅಪ್ಪನಿಗೆ ಅಪೆಂಡಿಕ್ಸ್ ಆಪರೇಷನ್ ಆದಾಗ ಹುದ್ದೆಯ ಮೇಲು ಕೀಳುಗಳನ್ನು ಪಕ್ಕಕ್ಕಿಟ್ಟು ಎರಡು ಬಾಟಲಿ ರಕ್ತ ಕೊಟ್ಟಿದ್ದರು. ಸಾಲದ್ದಕ್ಕೆ ತಮ್ಮ ಗಾದಿಯನ್ನು ಕಳಿಸಿದ್ದರು – ಆಪರೇಷನ್ ಆದ ಮನುಷ್ಯ ನೆಲದ ಮೇಲೆ ಮಲಗಿದರೆ ಥಂಡಿಗೆ ಗಾಯ ಬೇಗ ಒಣಗುವುದಿಲ್ಲವೆಂದು. ಅವರು ಕರುಣೆ ಮತ್ತು ಕೊಡುಗೈಗಳು ಒಬ್ಬರಲ್ಲೇ ಮೇಳೈಸಿದ್ದಂಥ ಅಪರೂಪದ ವ್ಯಕ್ತಿ.

'ದೂರದ ಗಂಗಾವತಿಗೆ ಟ್ರಾನ್ಸ್‌ಫರ್ ಆಗಿದ್ದಕ್ಕೇ ಈ ಗಾದಿನ್ನ ಹೊತ್ಕೊಂಡು ಹೋಗೋ ಬದಲಿಗೆ ಹಿಂಗ ಲಸುಮಣ್ಣಗ ಕೊಟ್ಟಾರ. ಅದೇ ನಾನು ಸೈಕಲ್ ಕೇಳ್ತೀನಿ. ಕೊಡ್ತಾರ?' ಅಂತ ಅದನ್ನು ಹೊತ್ತುಕಂಡು ಬರೋ ಕೆಲಸ ಹೇಳಿದ ದಿನವೇ, ಭೀಮಪ್ಪ ಯಾರ ಜತೆಗೋ ಪಂಥ್ಯ ಕಟ್ಟಿದನಂತೆ. ಆತ ಆ ದವಾಖಾನೆಯಲ್ಲಿ ಮತ್ತೊಬ್ಬ ಪೀವನ್. ಆದರೆ, ಕಮ್ಮಿ ಪೈಕಿ ಅಲ್ಲ. ರಾಮಾಯಣ, ಮಹಾಭಾರತ, ಭಾಗವತ, ಬಯಲಾಟಗಳೆಲ್ಲ ಬಾಯಿಪಾಠ ಆಗಿರುವ ಮನುಷ್ಯ. ಹುಡುಕಿಕೊಂಡು ಬಂದವರಿಗೆ ಒಳ್ಳೇದು ಕೆಟ್ಟದ್ದು ಹೇಳ್ತಿದ್ದ. ಜಡೀಬೂಟಿ ಔಷಧಿ ಮಾಡ್ತಿದ್ದ. ಅಂತ್ರ ಮಂತ್ರ ಕಟ್ತಿದ್ದ. ಗಾಳಿ ಧೂಳಿ ಓಳು ಮಾಡ್ತಿದ್ದ. ಅಪ್ಪನಿಗಿಂತ ನಾಕಾರು ವರ್ಷ ದೊಡ್ಡವನಿರಬೇಕು. ಆದರೆ, ನರೆಗೂದಲ ಉದ್ದಾನುದ್ದದ ಗಡ್ಡದಿಂದಾಗಿ ಅಮ್ಮ ಆತನಿಗೆ 'ಅಪ್ಪಾ...' ಅನ್ನುತ್ತಿದ್ದಳು. 'ನನ್ನ ಮಗಳನ್ನ ಚೊಲೋ ನೋಡಿಕ್ಯಬೇಕಪಾ ಅಳೆದೇವ್ರು ನೀನು' ಅಂತ ಅಪ್ಪನಿಗೆ ತಾಕೀತು ಮಾಡ್ತಿದ್ದ ದೋಸ್ತಾನಿಯ ಸಲಿಗೆಯಲ್ಲಿ. ಅಪ್ಪನ ಹೊಟ್ಟೆಬ್ಯಾನಿಗೆ ಜೀರಿಗಿ, ಅಜಿವಾನ, ಬೆಲ್ಲಗಳಿಗೆ ತುಪ್ಪ